

**ಚಂದ್ರಿಕಾ ಹೆಗಡೆ**

ಕಲೆ: ಸಂತೋಷ್ ಸಸಿಹಿತ್ಲು

# ಅಜ್ಜಿ ಮನೆಗೆ ಬನ್ನಿರಿ

ಬನ್ನಿ ಬನ್ನಿ ಮಕ್ಕಳೇ
ಅಜ್ಜಿ ಮನೆಗೆ ಬನ್ನಿರಿ
ಆಡಿಕೊಂಡು ಹಾಡಿಕೊಂಡು
ಕಾಲ ಕಳೆಯ ಬನ್ನಿರಿ

ಬಹಳ ದಿನಗಳಾದ ಮೇಲೆ
ರಜೆಯು ಬಂದಿದೆ
ಪಾಠ ಪರೀಕ್ಷೆ ಎಲ್ಲ ಮುಗಿದು
ಬಿಡುವು ಸಿಕ್ಕಿದೆ

ಶಾಲೆ ಮರೆತು ಬುಕ್ಕು ಬಿಟ್ಟು
ಬ್ಯಾಗು ತುಂಬಿರಿ
ಬೇಗ ಬೇಗ ಸಿದ್ಧರಾಗಿ
ಊರ ಬಸ್ಸು ಹತ್ತಿರಿ

ಅಜ್ಜಿ ಮನೆಯ ಹಿತ್ತಿಲಲ್ಲಿ
ಹೂವು ಹಣ್ಣು ತುಂಬಿದೆ
ಅಲ್ಲೇ ಸ್ವಲ್ಪ ದೂರದಲ್ಲಿ
ತಿಳಿ ನೀರ ಹೊಳೆಯಿದೆ

ಹೊಲ ಗದ್ದೆ , ಬೆಟ್ಟ ಬಯಲು
ಸುತ್ತ ಮುತ್ತ ಹರಡಿದೆ
ಹಲವು ಹಕ್ಕಿ ಪುಟ್ಟ ಚಿಟ್ಟೆ
ರೆಕ್ಕೆ ಬಿಚ್ಚಿ ಹಾರಿವೆ

ನೀಲಿ ನವಿಲು ಕೇಕೆ ಹಾಕಿ
ಗರಿಯ ಬಿಚ್ಚಿ ಕುಣಿದಿದೆ
ದನ ಕರು , ಮೇಕೆ ಮರಿ
ಹಾರಿ ನೆಗೆದು ಕರೆದಿವೆ

ದಿನಕ್ಕೊಂದು ತಿಂಡಿ ತಿನಿಸು
ರುಚಿ ರುಚಿ ಅಡಿಗೆ
ಅಜ್ಜ ಅಜ್ಜಿ ಪ್ರೀತಿ
ಎದೆಯ ತುಂಬ ಬೆಚ್ಚಗೆ

ಹೇಳೋರಿಲ್ಲ ಕೇಳೋರಿಲ್ಲ
ಬಯ್ಯೋರಿಲ್ಲ ಇಲ್ಲಿ
ಬರೀ ಆಟ....ಆಟ....
ಪಾಠ ಮರೆತು ಹೋಗಲಿ !

ಬನ್ನಿ ಬನ್ನಿ ಬೇಗ ಬನ್ನಿ
ಅಜ್ಜಿ ಮನೆಯು ಕರೆದಿದೆ
ಬನ್ನಿ ಮುದ್ದು ಮಕ್ಕಳೇ
ಮಜಾ ಇಲ್ಲಿ ಕಾದಿದೆ !

